INTRODUCTION OF BILL.

Sri T. SUBRAMANYA (Minister for Development and Local Self-Government).—Sir, I beg to introduce the Mysore Village Panchayats and Local Boards (Amendment) Bill, 1961 which has been published in the Gazette as required under rule 64 of the Rules of Procedure and Conduct of Business in the Mysore Legislative Assembly.

Mr. SPEAKER.—The Mysore Village Panchayats and Local Boards (Amendment) Bill, 1961 is introduced.

MEMBER'S REPRESENTATION

ಶ್ರೀ ಬಿ. ಕೆ. ನಾಗೂರು (ಬಿಜಾಪುರ).—ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೆ. ಅದು ಬಿಜಾಪುರ ಮುನಿಸಿಪಾಲಿಟಿಯದು, ಬಹಳ ಮಹತ್ವದ್ದು. ಇದರ ಬಗ್ಗೆ ನನಗೆ ದಿನಾಲೂ ಟೆಲಿಗ್ರಾಂಗಳು ಬರುತ್ತಾ ಇವೆ. ಅದನ್ನು ತಾವು ನೋಡುತ್ತೇನೆ ಎಂದು ಹೇಳಿದ್ದಿರಿ. ಅದನ್ನು ಕೇಳಲಿಕ್ಕೆ ನಿಂತಿದ್ದೇನೆ.

Sri B. D. JATTI.—The Honourable Member is referring to the transfer of the administration of Bijapur municipality. The Government Law enquired into the whole affairs. We have not got the final report. So it is not possible to transfer at present.

ಶ್ರೀ ಬಿ. ಕೆ. ನಾಗೂರು.—ನಾನು ಕೊಟ್ಟಿರುವ ಪ್ರಶ್ನೆಯನ್ನು ನೋಡಿಕೊಂಡು ಹೇಳಿದ್ದರೆ ಚೆನ್ನಾಗಿತ್ತು. ನಾನು ಅಲ್ಲಿರುವ ಅಧಿಕಾರಿಗಳನ್ನು ಟ್ರಾನ್ಸ್‌ಫರು ಮಾಡಬೇಕು ಎಂದು ಕೇಳಿಲ್ಲ. ತಾವು ಸ್ವಲ್ಪ ತಿಳಿದುಕೊಂಡು ನನ್ನ ಪ್ರಶ್ನೆಯನ್ನು ನೋಡಿದ್ದರೆ ಗೊತ್ತಾಗುತ್ತಿತ್ತು. ಅಲ್ಲಿರುವ ಮುನಿಸಿಪಾಲಿಟಿಯ ಆದಿತವು ಹದಗೆಟ್ಟು ಹೊಲಸಾಗಿ ಹೋಗುತ್ತಿದೆ. ಅದರ ಬಗ್ಗೆ ತುರ್ತಾದ ಕ್ರಮ ತೆಗೆದುಕೊಳ್ಳಬೇಕು. ನನಗೆ ಊರಿನಿಂದ ಫೋನುಗಳು, ತಾರುಗಳು ಬರುತ್ತಿವೆ. ಅದರಮೇರೆ ನನ್ನ ಪ್ರಶ್ನೆಗಳನ್ನು ಕಳುಹಿಸಿವೆ.

ಶ್ರೀ ಬಿ. ಡಿ. ಜತ್ತಿ.—ಅದರಬಗ್ಗೆ ಹೇಳುವುದಾದರೆ ಅಲ್ಲಿನ ಜನಕ್ಕೆ ಬಹಳ ಅನಕೂಲವಾಗಿದೆ ಎಂದು ಕಾಣಬರುತ್ತದೆ. ಆದರೆ ಶ್ರೀಮಾನ್ ನಾಗೂರವರು ಇಲ್ಲಿ ಹೇಳುವಷ್ಟುಮಟ್ಟಿಗೆ ಇದೆ ಎಂದರೆ ಯಾರೂ ನಂಬುವುದಿಲ್ಲ.

ಶ್ರೀ ಬಿ. ಕೆ. ನಾಗೂರು.—ಅಲ್ಲಿರುವ ನುಮಾರು ಹತ್ತು ಸಾವಿರ ಜನರು ಸಹಿ ಮಾಡಿ ಕಳುಹಿಸಿದ ಅರ್ಜಿ ಮುಖ್ಯಮಂತ್ರಿಗಳ ಕಡೆಗೆ ಬಂದಿದ್ದರೂ ಅವರು ಹೀಗೆ ಹೇಳುವುದು ಸರಿಯಲ್ಲ. ನಾನು ಹೇಳುವುದು ಸರಿಯಾಗಿಲ್ಲ ಎಂದು ರುಜುವಾಳು ಮಾಡಿದರೆ ನಾನು ಈ ಸಭೆಯ ಸದಸ್ಯತ್ವಕ್ಕೆ ಬೇಕಾದರೆ ರಾಜೀನಾಮೆ ಕೊಡುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ರಿಸೈನ್ ಮಾಡುವುದಾದರೆ ಮಾಡಿ.

ಶ್ರೀ ಬಿ. ಕೆ. ನಾಗೂರು.—ನಾನು ಬಿಜಾಪುರದ ಸಿಟಿಮೆಂಬರುವನು, ತಾವು ಜಮಖಂಡಿಯಲ್ಲಿರುವವರು. ಅದರಿಂದ ಬಿಜಾಪುರದ ಪ್ರಾಂತದ ವಿಚಾರ ಇಲ್ಲಿ ತಂದೆ.

ಅಧ್ಯಕ್ಷರು.—ಸರಕಾರದ ಕಡೆಯಿಂದ ಇನ್ನೂ ಇದರ ಬಗ್ಗೆ ಉತ್ತರ ಬಂದಿಲ್ಲ.